**1 ನೇ ಹೆಚ್ಚುವರಿ ವಿಶೇಷ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಚಿಕ್ಕಮಗಳೂರು**

ಸ್ಪೆಷಲ್ ಮೊಕದ್ದಮೆ ನಂಃ 144/2021

| | | |
|---|---|---|
| ಸಾಕ್ಷಿದಾರರ ಹೆಸರು | - ಸರೋಜ | ಪಿಡಬ್ಲೂ - 01 |
| ಗಂಡನ ಹೆಸರು | - ಏಳುಮಲೈ | ಸಿಡಬ್ಲೂ - 01 |
| ವಯಸ್ಸು | - 41 ವರ್ಷ | |
| ಉದ್ಯೋಗ | - ಕೂಲಿ ಕೆಲಸ | |
| ವಾಸ ಸ್ಥಳ | - ಕೊಪ್ಪ | |

ದಿನಾಂಕಃ 13.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-**

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು, ಆತ ನಮ್ಮ ಊರಿನವನು. ಚಾಸಾ.9 ನನ್ನ ಮಗಳು. ಚಾಸಾ.2, 15 ಮತ್ತು 16 ಗೊತ್ತು. ಚಾಸಾ.3, 4, 5, 6, 7, 11, 14 ನನ್ನ ಸಂಬಂಧಿಕರು. ಚಾಸಾ.8 ನನ್ನ ತಂಗಿ. ಚಾಸಾ.12 ಮತ್ತು 13 ರವರು ಚಾಸಾ.7 ರವರ ಮಕ್ಕಳು. ಚಾಸಾ.10 ರವರು ಚಾಸಾ.3 ರವರ ಮಗಳು. ನಾನು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜನಾಂಗಕ್ಕೆ ಸೇರಿದವಳು. ಆರೋಪಿ ಭಂಡಾರಿ ಜಾತಿಗೆ ಸೇರಿದವನು.

2. ನನ್ನ ಮಗಳಾದ ಚಾಸಾ.9 ಮತ್ತು ನನ್ನ ತಂಗಿ ಮತ್ತು ಸಂಬಂಧಿಕರ ಮಕ್ಕಳಾ ಚಾಸಾ.10 ಮತ್ತು 12 ರವರು ಶಾಲೆಗೆ ಹೋಗಿ ಬರುವಾಗ ಆರೋಪಿ ಅವರನ್ನು ಚುಡಾಯಿಸುತ್ತಿದ್ದನು. ಆ ಬಗ್ಗೆ ಆರೋಪಿಯನ್ನು ಕೇಳಲೆಂದು ಈಗ್ಗೆ 4 ವರ್ಷಗಳ ಹಿಂದೆ

ಒಂದು ದಿನ ರಾತ್ರಿ 9 ಗಂಟೆ ಸುಮಾರಿಗೆ ನಾನು, ಚಾಸಾ.3, 5 ರಿಂದ 8 ರವರು ಆತನ ಮನೆಯ ಬಳಿ ಹೋದೆವು. ಆಗ ಆರೋಪಿ ನಮ್ಮನ್ನು ಕುರಿತು, ನೀವೆಲ್ಲಾ ಏಕೆ ಇಲ್ಲಿಗೆ ಬಂದಿದ್ದೀರಿ, ನಿಮ್ಮನ್ನು ಕಡಿದು ಹಾಕುತ್ತೇನೆ, ನೀವು ಹೊಲೆಯರು, ನೀವು ಎಲ್ಲಿಗೆ ಹೋದರು ಏನ್ನನ್ನು ಮಾಡಿಕೊಳ್ಳಲು ಆಗುವುದಿಲ್ಲ, ನಿಮ್ಮನ್ನು ಯಾರು ಕೇರ್ ಮಾಡುವುದಿಲ್ಲ ಎಂದು ಹೇಳಿದನು. ನಮ್ಮ ಮನೆಯ ಬಳಿ ಕೃಷ್ಣಮೂರ್ತಿ ಭಟ್ ರವರು ಇದ್ದಾರೆ. ಅವರು ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುತ್ತಿದ್ದರು. ಅವರೊಂದಿಗೆ ನಮ್ಮ ಮಕ್ಕಳು ಟೂರ್ ಗೆ ಹೋಗುತ್ತಿದ್ದರು. ಆ ವಿಚಾರಕ್ಕೆ ಆರೋಪಿ ನಮ್ಮ ಮಕ್ಕಳನ್ನು ಕುರಿತು, ಕೃಷ್ಣಮೂರ್ತಿರವರ ಜೊತೆ ಟೂರ್ ಹೋಗುತ್ತೀರಿ, ನನ್ನ ಜೊತೆ ಬರಬಾರದ ಎಂದು ಚುಡಾಯಿಸುತ್ತಿದ್ದನು.

3. ನಂತರ ನಾನು ಕೊಪ್ಪ ಪೊಲೀಸ್ ಠಾಣೆಗೆ ಹೋಗಿ ಆರೋಪಿಯ ವಿರುದ್ಧ ಕ್ರಮ ಜರುಗಿಸುವಂತೆ ದೂರನ್ನು ಕೊಟ್ಟೆನು. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಲಾಗಿ ಅದರ ಕಲಂ.12 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ವರದಿಯನ್ನು ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

ದೂರನ್ನು ಕೊಟ್ಟಿದ್ದನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಕ್ರಿಯೆ ನಡೆದಿಲ್ಲ.

(ವಿಶೇಷ ಸರ್ಕಾರಿ ಅಭಿಯೋಜಕರವರು ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಗೆ ಸಮಯ ಕೋರಿದ ಮೇರೆಗೆ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ